## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : **1231** |
| ಉತ್ತರಿಸಬೇಕಾದ ದಿನಾಂಕ | : 21.08.2025 |
| ಸದಸ್ಯರ ಹೆಸರು | :ಶ್ರೀ ಶಾಂತಾರಾಮ್ ಬುಡ್ನ ಸಿದ್ಧಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ಸಚಿವರು | : ಮಾನ್ಯ ಮುಖ್ಯಮಂತ್ರಿಯವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಇರುವ ವಿವಿಧ ಯೋಜನೆಗಳು ಯಾವುವು; ಅವುಗಳ ಮಾನದಂಡಗಳು ಯಾವುವು (ಮಾಹಿತಿ ನೀಡುವುದು) | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಇರುವ ವಿವಿಧ ಯೋಜನೆಗಳು ಅವುಗಳ ಮಾನದಂಡಗಳ ಸಂಕ್ಷಿಪ್ತ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ಬುಡಕಟ್ಟು ಜನಾಂಗದ ಕ್ರೀಡಾಪಟುಗಳಿಗಾಗಿ ಯಾವುದಾದರೂ ವಿಶೇಷ ಯೋಜನೆ ಅಥವಾ ಕಾರ್ಯಕ್ರಮಗಳು ಇವೆಯೇ; ಇದ್ದರೆ, ಮಾನದಂಡಗಳ ಸಮೇತ ವಿವರಿಸುವುದು. | ಹೌದು ಇವೆ.<br><br>ಬುಡಕಟ್ಟು ಜನಾಂಗದ ಕ್ರೀಡಾಪಟುಗಳಿಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಹಮ್ಮಿಕೊಂಡಿರುವ ವಿಶೇಷ ಯೋಜನೆ /ಕಾರ್ಯಕ್ರಮಗಳ ವಿವರಗಳು ಕೆಳಕಂಡಂತಿವೆ:<br><br>1. **<u>ಕ್ರೀಡಾ ವಸತಿ ನಿಲಯಗಳು:</u>** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಬುಡಕಟ್ಟು ಜನಾಂಗದ ಕ್ರೀಡಾಪಟುಗಳಿಗೆ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ಕ್ರೀಡಾ ವಸತಿ ನಿಲಯದಲ್ಲಿ ಸಿದ್ಧಿ ಕ್ರೀಡಾಪಟುಗಳಿಗೆ ಪ್ರತ್ಯೇಕ ವಿಭಾಗ, ಬೆಂಗಳೂರಿನ ವಿದ್ಯಾನಗರ ಕ್ರೀಡಾ ವಸತಿ ನಿಲಯದಲ್ಲಿ ಸಿದ್ಧಿ ಕ್ರೀಡಾ ವಿಭಾಗ ಹಾಗೂ ಚಾಮರಾಜನಗರ ಜಿಲ್ಲೆಯ ಸಂತೇಮರಳ್ಳಿಯಲ್ಲಿ ಆರ್ಚರಿ ಮತ್ತು ಫೆನ್ಸಿಂಗ್ ಕ್ರೀಡಾ ವಸತಿ ಶಾಲೆ ನಿಲಯವನ್ನು ಪ್ರಾರಂಭಿಸಲಾಗಿರುತ್ತದೆ.<br><br>ಈ ಕ್ರೀಡಾ ವಸತಿ ಶಾಲೆಗಳಿಗೆ ದೈಹಿಕ ಕ್ಷಮತೆ ಮತ್ತು ಕ್ರೀಡಾ ಕೌಶಲ್ಯ ಆಧರಿಸಿ, ಆಯ್ಕೆ ಶಿಬಿರಗಳ ಮೂಲಕ ಅರ್ಹ ಕ್ರೀಡಾಪಟುಗಳನ್ನು ಆಯ್ಕೆ ಮಾಡಿ, 5ನೇ ತರಗತಿ, 8ನೇ ತರಗತಿ ಮತ್ತು ಪ್ರಥಮ ಪಿಯುಸಿ ಹಂತಗಳಲ್ಲಿ ಪ್ರವೇಶಾವಕಾಶ ನೀಡಲಾಗುತ್ತಿದೆ. ಕ್ರೀಡಾ ವಸತಿ ಶಾಲೆ/ನಿಲಯಗಳಲ್ಲಿ ಪ್ರವೇಶ ಪಡೆದ ಕ್ರೀಡಾಪಟುಗಳಿಗೆ ಉಚಿತ ವಸತಿ, ಊಟೋಪಹಾರ, ಕ್ರೀಡಾ ತರಬೇತಿ, ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಪ್ರಯಾಣ ಭತ್ಯೆ/ದಿನ ಭತ್ಯೆ, ಕ್ರೀಡಾ ಸಾಮಗ್ರಿಗಳನ್ನು ಒದಗಿಸಲಾಗುತ್ತಿದೆ.<br><br>2. **<u>ಅರಣ್ಯಾಧಾರಿತ ಬುಡಕಟ್ಟು ವರ್ಗದ ಕ್ರೀಡಾಕೂಟ:</u>** 2025-26ನೇ ಸಾಲಿನಲ್ಲಿ ಮೈಸೂರು, ಚಾಮರಾಜನಗರ, ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಅರಣ್ಯಾಧಾರಿತ ಬುಡಕಟ್ಟು ವರ್ಗದ ಮೂಲ ನಿವಾಸಿ ಕ್ರೀಡಾಪಟುಗಳಿಗೆ ಕ್ರೀಡಾಕೂಟವನ್ನು ಆಯೋಜಿಸಲಾಗುವುದು. |

| | | |
|---|---|---|
| ಇ) | ಉತ್ತರ ಕನ್ನಡ ಜಿಲ್ಲೆಯ ಬುಡಕಟ್ಟು ಸಿದ್ಧಿ ಜನಾಂಗವು ಕ್ರೀಡೆಯಲ್ಲಿ ವಿಶೇಷ ಸಾಮರ್ಥ್ಯವನ್ನು ಹೊಂದಿದ್ದು, ಇಲ್ಲಿಯ ಯುವ ಕ್ರೀಡಾಳುಗಳನ್ನು ಉನ್ನತ ಮಟ್ಟದಲ್ಲಿ ಸಾಧನೆ ಮಾಡಲು ಸಿದ್ಧಿ ಯುವಕರಿಗಾಗಿ ಕಳೆದ 3 ವರ್ಷಗಳಲ್ಲಿ ಜಿಲ್ಲೆಯಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಯಾವುವು? (ಕ್ರೀಡಾಪಟುಗಳು ಸಾಧನೆ ಮಾಡಿದ್ದರೆ ಅವುಗಳ ಮಾಹಿತಿ ನೀಡುವುದು.) | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಬುಡಕಟ್ಟು ಜನಾಂಗದ ಕ್ರೀಡಾಪಟುಗಳಿಗೆ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ಕ್ರೀಡಾ ವಸತಿ ನಿಲಯದಲ್ಲಿ ಸಿದ್ಧಿ ಕ್ರೀಡಾಪಟುಗಳಿಗೆ ಪ್ರತ್ಯೇಕ ವಿಭಾಗ, ಪ್ರಾರಂಭಿಸಲಾಗಿದ್ದು, ಪ್ರತೀ ವರ್ಷ ಉತ್ತರ ಕನ್ನಡ ಜಿಲ್ಲೆಯ ತಾಲ್ಲೂಕು ಕೇಂದ್ರಗಳಲ್ಲಿ ವಿಶೇಷ ಆಯ್ಕೆ ಶಿಬಿರಗಳನ್ನು ಆಯೋಜಿಸುವ ಮೂಲಕ ಕ್ರೀಡಾಪಟುಗಳಾಗಲು ಅಗತ್ಯ ದೈಹಿಕ ಕ್ಷಮತೆ ಮತ್ತು ಕೌಶಲ್ಯಗಳನ್ನು ಹೊಂದಿದ ಸಿದ್ಧಿ ಬಾಲಕ:ಬಾಲಕಿಯರನ್ನು ಗುರುತಿಸಿ, ಪ್ರವೇಶ ನೀಡಲಾಗುತ್ತಿದೆ.<br><br>ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ಕ್ರೀಡಾ ವಸತಿ ನಿಲಯ ಹಾಗೂ ವಿದ್ಯಾನಗರ ಕ್ರೀಡಾ ವಸತಿ ನಿಲಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಿದ್ಧಿ ಕ್ರೀಡಾಪಟುಗಳು ದಾಖಲಿಸಿರುವ ಸಾಧನೆ ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |

**ವೈಎಸ್‌ಡಿ-ಸಿಡಿಎಸ್/337/2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ

## ಅನುಬಂಧ-1

## ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಪ್ರಮುಖ ಕಾರ್ಯಕ್ರಮಗಳ ವಿವರ

1. **ಸಾಧಕ ಕ್ರೀಡಾಪಟುಗಳಿಗೆ ಉದ್ಯೋಗಾವಕಾಶ:**

**ಒಲಿಂಪಿಕ್ಸ್, ಪ್ಯಾರಾಲಿಂಪಿಕ್ಸ್ ಪದಕ ವಿಜೇತರಿಗೆ** ರಾಜ್ಯ ಸರ್ಕಾರದ ಇಲಾಖೆಗಳಲ್ಲಿ **ಗುಂಪು-ಎ ಹುದ್ದೆ ಮತ್ತು ಏಷಿಯನ್ ಗೇಮ್ಸ್, ಪ್ಯಾರಾ ಏಷಿಯನ್ ಗೇಮ್ಸ್, ಕಾಮನ್‌ವೆಲ್ತ್ ಗೇಮ್ಸ್‌ಗಳಲ್ಲಿ ಪದಕ ವಿಜೇತ ಕ್ರೀಡಾಪಟುಗಳಿಗೆ** ರಾಜ್ಯ ಸರ್ಕಾರದ ಇಲಾಖೆಗಳಲ್ಲಿ, **ಗುಂಪು-ಬಿ** ಮತ್ತು ಇತರೆ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲಾಗುತ್ತಿದೆ.

2. **ಸಾಧಕ ಕ್ರೀಡಾಪಟುಗಳಿಗೆ ನಗದು ಪುರಸ್ಕಾರ:** ರಾಷ್ಟ್ರೀಯ ಮತ್ತು ಅಂತರ-ರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದ ಕರ್ನಾಟಕದ ಕ್ರೀಡಾಪಟುಗಳಿಗೆ ಕೆಳಕಾಣಿಸಿದಂತೆ ನಗದು ಪುರಸ್ಕಾರವನ್ನು ನೀಡಲಾಗುತ್ತಿದೆ.

ರೂ.ಲಕ್ಷಗಳಲ್ಲಿ

| ಕ್ರ.ಸ | ವಿವರ | ಚಿನ್ನ | ಬೆಳ್ಳಿ | ಕಂಚು |
|---|---|---|---|---|
| 1 | ಒಲಂಪಿಕ್ಸ್ | 600.00 | 400.00 | 300.00 |
| 2 | ಏಷಿಯನ್ ಗೇಮ್ಸ್ | 35.00 | 25.00 | 15.00 |
| 3 | ಕಾಮನ್ ವೆಲ್ತ್ ಗೇಮ್ಸ್ | 35.00 | 25.00 | 15.00 |
| 4 | ವಿಶ್ವ ಕಪ್/ಚಾಂಪಿಯನ್ ಶಿಪ್ (ಭಾರತ ಸರ್ಕಾರದಿಂದ ಅಂಗೀಕೃತವಾಗಿ ಭಾರತ ತಂಡದ ಭಾಗವಾಗಿ ಪ್ರತಿನಿಧಿಸಿರಬೇಕು) | 5.00 | 3.00 | 2.00 |
| 5 | ನ್ಯಾಷನಲ್ ಗೇಮ್ಸ್ (ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ಕ್ರೀಡೆಗಳು) | 5.00 | 3.00 | 2.00 |
| 6 | ನ್ಯಾಷನಲ್ ಚಾಂಪಿಯನ್ ಶಿಪ್ (ಒಲಂಪಿಕ್ ಕ್ರೀಡೆಗಳಿಗೆ) | 2.00 | 1.00 | 0.50 |
| 7 | ಜೂನಿಯರ್ ನ್ಯಾಷನಲ್ (ಒಲಂಪಿಕ್ ಕ್ರೀಡೆಗಳಿಗೆ) | 0.50 | 0.25 | 0.15 |
| 8 | ಸಬ್ ಜೂನಿಯರ್ ನ್ಯಾಷನಲ್ (ಒಲಂಪಿಕ್ ಕ್ರೀಡೆಗಳಿಗೆ) | 0.25 | 0.15 | 0.10 |

3. **ಏಕಲವ್ಯ ಪ್ರಶಸ್ತಿ**:_ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಪ್ರಶಸ್ತಿ ನೀಡುವ ವರ್ಷ ಸೇರಿದಂತೆ ಕಳೆದ 5 ವರ್ಷಗಳಲ್ಲಿನ ಮೂರು ಅತ್ಯುನ್ನತ ಸಾಧನೆಗಳನ್ನು ಆಧರಿಸಿ ಏಕಲವ್ಯ ಪ್ರಶಸ್ತಿ ನೀಡಲಾಗುತ್ತಿದೆ.

4. **ಜೀವಮಾನ ಸಾಧನೆ ಪ್ರಶಸ್ತಿ:** ಕ್ರೀಡಾ ಕ್ಷೇತ್ರದಲ್ಲಿ ನಿರಂತರವಾಗಿ ಸೇವೆ ಸಲ್ಲಿಸಿ ಅಪ್ರತಿಮ ಸಾಧನೆ ಮಾಡಿದಂತಹ ಹಿರಿಯ ತರಬೇತುದಾರರನ್ನು ಗುರುತಿಸಿ ಗೌರವಿಸಲು ಜೀವಮಾನ ಸಾಧನೆ ಪ್ರಶಸ್ತಿಯನ್ನು ಪ್ರತಿ ವರ್ಷ ನೀಡಲಾಗುತ್ತಿದೆ.

5. **ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ:** ಗ್ರಾಮೀಣ ಮತ್ತು ಪಾರಂಪರಿಕ ಕ್ರೀಡೆಗಳಾದ ಕುಸ್ತಿ, ಕಬಡ್ಡಿ, ಖೋ-ಖೋ, ಕಂಬಳ ಇತ್ಯಾದಿ ಕ್ರೀಡೆಗಳಲ್ಲಿ ಅತ್ಯುತ್ತಮ ಸಾಧಕರನ್ನು ಗುರುತಿಸಿ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

6. **ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ:** ಕ್ರೀಡಾ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡು ಕ್ರೀಡೆಯ ಅಭಿವೃದ್ಧಿಗೆ ನೆರವು ನೀಡಿ ರಾಜ್ಯ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕ್ರೀಡಾ ಕ್ಷೇತ್ರದಲ್ಲಿ ಕ್ರೀಡಾಪಟುಗಳು ಸಾಧನೆಗೈಯಲು ಕೊಡುಗೆ ನೀಡಿದ ಕ್ರೀಡಾ ಪೋಷಕರಿಗೆ ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿಯನ್ನು ಪ್ರತಿ ವರ್ಷ ನೀಡಲಾಗುತ್ತಿದೆ.

7. **ಶೈಕ್ಷಣಿಕ ಶುಲ್ಕ ಮರುಪಾವತಿ:** ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿ ವಿಜೇತರಾದ ಪ್ರಥಮ ಪಿ.ಯು.ಸಿ ಯಿಂದ ಸ್ನಾತಕೋತ್ತರ ಪದವಿ (ವೃತ್ತಿಪರ ಕೋರ್ಸ್ ಒಳಗೊಂಡಂತೆ) ವ್ಯಾಸಂಗ ಮಾಡುತ್ತಿರುವ ಕ್ರೀಡಾಪಟುಗಳಿಗೆ ಹಿಂದಿನ 5 ವರ್ಷಗಳ ಕ್ರೀಡಾ ಸಾಧನೆಯನ್ನು ಪರಿಗಣಿಸಿ ವಾರ್ಷಿಕ ಗರಿಷ್ಟ ರೂ 50,000/- ವರೆಗೆ ಶೈಕ್ಷಣಿಕ ಶುಲ್ಕ ಮರುಪಾವತಿ ಮಾಡುವ ಮೂಲಕ ಪ್ರೋತ್ಸಾಹ ನೀಡಲಾಗುತ್ತಿದೆ.

8. **ಕ್ರೀಡಾ ವಿದ್ಯಾರ್ಥಿ ವೇತನ:** ರಾಜ್ಯ ಮಟ್ಟದ ಅಧಿಕೃತ ಕ್ರೀಡಾಕೂಟಗಳಲ್ಲಿ ಪ್ರಥಮ ಸ್ಥಾನ ಪಡೆದ ಅಥವಾ ಭಾರತ ಸರ್ಕಾರದಿಂದ ಮಾನ್ಯತೆ ಪಡೆದ ಅಧಿಕೃತ ಕ್ರೀಡಾ ಸಂಸ್ಥೆಗಳು ಆಯೋಜಿಸುವ ರಾಷ್ಟ್ರ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿದ 6 ರಿಂದ 10 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ರಾಜ್ಯದ ಕ್ರೀಡಾಪಟುಗಳಿಗೆ ವಾರ್ಷಿಕ ರೂ 10,000/- ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

9. **ಯುವ ಚೈತನ್ಯ:** ಗ್ರಾಮೀಣ ಯುವಜನತೆಯು ಆರೋಗ್ಯಕರ ಕಾರ್ಯಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಸಹಾಯಕವಾಗುವ ವಾತಾವರಣವನ್ನು ಸೃಜಿಸಲು ಯುವ ಸಂಘಗಳಿಗೆ 'ಯುವ ಚೈತನ್ಯ' ಕಾರ್ಯಕ್ರಮದಡಿ ತಲಾ ರೂ. 40,000/- ಗಳ ಘಟಕ ವೆಚ್ಚದಲ್ಲಿ ಕ್ರೀಡಾ ಕಿಟ್ ಗಳನ್ನು ವಿತರಿಸಲಾಗುತ್ತಿದೆ.

10. **ಪರಿಶಿಷ್ಟ ಜಾತಿ ಮತ್ತು ಪಂಗಡದ ಸಾಧಕ ಕ್ರೀಡಾಪಟುಗಳಿಗೆ ವಿಶೇಷ ಪ್ರೋತ್ಸಾಹಧನ:** ಅಂತರ-ರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳ ಪದಕ ವಿಜೇತರಿಗೆ ಕ್ರಮವಾಗಿ ತಲಾ ರೂ 5.00 ಲಕ್ಷ ಮತ್ತು ರೂ 3.00 ಲಕ್ಷ ಹಾಗೂ ರಾಜ್ಯ ಮಟ್ಟದ ಹಿರಿಯರ ಕ್ರೀಡಾಕೂಟದ ಪದಕ ವಿಜೇತರಿಗೆ ರೂ 50,000 ಮತ್ತು ರಾಜ್ಯ ಮಟ್ಟದ ಕಿರಿಯರ ಕ್ರೀಡಾಕೂಟದ ಪದಕ ವಿಜೇತರಿಗೆ ರೂ 25,000 ಗಳ ಪ್ರೋತ್ಸಾಹಧನ ನೀಡಲಾಗುತ್ತಿದೆ.

11. **ಮಾಜಿ ಕ್ರೀಡಾಪಟುಗಳಿಗೆ ಮಾಸಾಶನ:** ಕಷ್ಟ ಪರಿಸ್ಥಿತಿಯಲ್ಲಿರುವ 50 ವರ್ಷ ವಯೋಮಾನ ಮೀರಿದ ಹಿರಿಯ ಮಾಜಿ ಕುಸ್ತಿ ಮತ್ತು ಕುಸ್ತಿಯೇತರ/ಇತರೆ ಕ್ರೀಡೆಗಳ ಕ್ರೀಡಾಪಟುಗಳಿಗೆ ಮಾಸಾಶನ ನೀಡಲಾಗುತ್ತಿದೆ.

12. **ಕ್ರೀಡಾ ವಸತಿ ಶಾಲೆ/ನಿಲಯ:** ರಾಜ್ಯಾದ್ಯಾಂತ 32 ಕ್ರೀಡಾ ವಸತಿ ನಿಲಯಗಳು ಹಾಗೂ ಎರಡು ಕ್ರೀಡಾ ವಸತಿ ಶಾಲೆಗಳಿದ್ದು, ಸದರಿ ಕ್ರೀಡಾ ವಸತಿ ಶಾಲೆ/ನಿಲಯಗಳಲ್ಲಿ ಪ್ರವೇಶ

ಪಡೆಯುವ ಪ್ರತಿಭಾವಂತ ಯುವ ಕ್ರೀಡಾಪಟುಗಳಿಗೆ ಉಚಿತ ಊಟೋಪಹಾರ, ವಸತಿ, ಕ್ರೀಡಾ ತರಬೇತಿ ಮತ್ತು ಕ್ರೀಡಾ ಸಮವಸ್ತ್ರ, ಒದಗಿಸಲಾಗುತ್ತಿದೆ. ದೈಹಿಕ ಕ್ಷಮತೆ ಮತ್ತು ಕ್ರೀಡಾ ಕೌಶಲ್ಯ ಆಧರಿಸಿ 5ನೇ ತರಗತಿ, 8ನೇ ತರಗತಿ ಮತ್ತು ಪ್ರಥಮ ಪಿಯುಸಿ ಹಂತದ ಕ್ರೀಡಾಪಟುಗಳಿಗೆ ಆಯ್ಕೆ ಪ್ರಕ್ರಿಯೆ ನಡೆಸಿ, ಪ್ರವೇಶಾವಕಾಶ ಕಲ್ಪಿಸಲಾಗುತ್ತಿದೆ.

13. **ಯುವ ಶಕ್ತಿ ಕೇಂದ್ರ:** ಯುವಜನರ ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸಲು ಇಲಾಖಾ ಕ್ರೀಡಾಂಗಣಗಳು, ಕ್ರೀಡಾ ವಸತಿ ನಿಲಯಗಳು ಮತ್ತು ಸರ್ಕಾರಿ ಕಾಲೇಜುಗಳಿಗೆ ಜಿಮ್ ಉಪಕರಣಗಳನ್ನು ಒದಗಿಸಲಾಗುತ್ತಿದೆ.
14. **ಸಾಹಸ ಕ್ರೀಡೆಗಳು:** ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯ ಮೂಲಕ ಯುವಜನರಿಗೆ ಸಾಹಸ ಕ್ರೀಡಾ ಪ್ರಶಿಕ್ಷಕರಾಗಲು ವಿವಿಧ ಹಂತಗಳ ತರಬೇತಿಯನ್ನು ನೀಡಲಾಗುತ್ತಿದೆ. ಇದರೊಂದಿಗೆ ಭೂ ಸಾಹಸ, ವಾಯು ಸಾಹಸ ಮತ್ತು ಜಲಸಾಹಸ ಕ್ರೀಡೆಗಳಲ್ಲಿ ಸಾಹಸ ಕ್ರೀಡಾ ಚಟುವಟಿಕೆಗಳನ್ನು ಹಾಗೂ ಬೇಸಿಗೆ ಕ್ರೀಡಾ ತರಬೇತಿ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ.
15. **ಆಪ್ತ ಸಮಾಲೋಚನಾ ಸೌಲಭ್ಯ:** ನಿಮ್ಹಾನ್ಸ್ ಸಂಸ್ಥೆಯ ಸಹಯೋಗದೊಂದಿಗೆ ಯುವಜನರ ಮಾನಸಿಕ ಆರೋಗ್ಯ ಸಂಬಂಧಿತ ವಿಷಯಗಳ ಕುರಿತು ಜಾಗೃತಿ ಕಾರ್ಯಕ್ರಮಗಳು ಮತ್ತು ಅರಿವು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ ಹಾಗೂ ಆಪ್ತ ಸಮಾಲೋಚನಾ ಸೌಲಭ್ಯವನ್ನು ಒದಗಿಸಲಾಗುತ್ತಿದೆ.
16. **ಕ್ರೀಡಾ ಮೂಲ ಸೌಕರ್ಯಗಳ ಸೃಜನೆ:** ಜಿಲ್ಲಾ /ತಾಲ್ಲೂಕು ಹೊರಾಂಗಣ, ಒಳಾಂಗಣ ಕ್ರೀಡಾಂಗಣಗಳು, ಈಜುಕೊಳಗಳು, ವಿವಿಧ ಕ್ರೀಡಾ ಅಂಕಣಗಳು, ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್, ಸಿಂಥೆಟಿಕ್ ಹಾಕಿ ಟರ್ಫ್ ಮತ್ತು ಫುಟ್‌ಬಾಲ್ ಹಾಕಿ ಟರ್ಫ್ ಗಳನ್ನು ನಿರ್ಮಿಸಲಾಗುತ್ತಿದೆ.
17. **ಗುರಿ ಒಲಂಪಿಕ್ಸ್ ಪದಕ ಯೋಜನೆ:** ರಾಜ್ಯದ ಅತ್ಯಂತ ಪ್ರತಿಭಾನ್ವಿತ 60 ಕ್ರೀಡಾಪಟುಗಳನ್ನು ಗುರುತಿಸಿ 2028 ರ ಒಲಂಪಿಕ್ ತಯಾರಿಗೆ ವಾರ್ಷಿಕ ತಲಾ ರೂ 10.00 ಲಕ್ಷಗಳಂತೆ ಪ್ರೋತ್ಸಾಹ ಧನ ನೀಡಲಾಗುವುದು.

## ಅನುಬಂಧ - 2

### ಕಳೆದ ಮೂರು ವರ್ಷಗಳಲ್ಲಿ ಇಲಾಖೆಯ ಕ್ರೀಡಾ ವಸತಿ ಶಾಲೆ/ನಿಲಯಗಳ ಸಿದ್ದಿ ಕ್ರೀಡಾಪಟುಗಳ ಸಾಧನೆಯ ವಿವರ

**2022-23**

| ಕ್ರ. ಸಂ | ಜಿಲ್ಲೆ | ಕ್ರೀಡಾ ಶಾಲೆ/ ವಸತಿ ನಿಲಯ | ಕ್ರೀಡೆ | ರಾಜ್ಯ | | | ರಾಷ್ಟ್ರೀಯ | | | ಅಂತರ ರಾಷ್ಟ್ರೀಯ | | | ಒಟ್ಟು |
|---|---|---|---|---|---|---|---|---|---|---|---|---|---|
| | | | | ಚಿನ್ನ | ಬೆಳ್ಳಿ | ಕಂಚು | ಚಿನ್ನ | ಬೆಳ್ಳಿ | ಕಂಚು | ಚಿನ್ನ | ಬೆಳ್ಳಿ | ಕಂಚು | |
| 1 | ಉತ್ತರ ಕನ್ನಡ | ಹಳಿಯಾಳ | ಕುಸ್ತಿ | 10 | 0 | 1 | 0 | 1 | 1 | 0 | 0 | 0 | 13 |
| 2 | ಬೆಂಗಳೂರು | ವಿದ್ಯಾನಗರ | ಬಾಕ್ಸಿಂಗ್ | Nil | | | | | | | | | |
| | ಒಟ್ಟು | | | **15** | **5** | **4** | **0** | **1** | **1** | **0** | **0** | **0** | **26** |

**2023-24**

| ಕ್ರ.ಸಂ | ಜಿಲ್ಲೆ | ಕ್ರೀಡಾ ಶಾಲೆ/ ವಸತಿ ನಿಲಯ | ಕ್ರೀಡೆ | ರಾಜ್ಯ | | | ರಾಷ್ಟ್ರೀಯ | | | ಅಂತರ ರಾಷ್ಟ್ರೀಯ | | | ಒಟ್ಟು |
|---|---|---|---|---|---|---|---|---|---|---|---|---|---|
| | | | | ಚಿನ್ನ | ಬೆಳ್ಳಿ | ಕಂಚು | ಚಿನ್ನ | ಬೆಳ್ಳಿ | ಕಂಚು | ಚಿನ್ನ | ಬೆಳ್ಳಿ | ಕಂಚು | |
| 1 | ಉತ್ತರ ಕನ್ನಡ | ಹಳಿಯಾಳ | ಕುಸ್ತಿ | 17 | 2 | 4 | 2 | 1 | 2 | 0 | 0 | 0 | 28 |
| 2 | ಬೆಂಗಳೂರು | ವಿದ್ಯಾನಗರ | ಬಾಕ್ಸಿಂಗ್ | 5 | 5 | 3 | 0 | 0 | 0 | 0 | 0 | 0 | 13 |
| | ಒಟ್ಟು | | | **22** | **7** | **7** | **2** | **1** | **2** | **0** | **0** | **0** | **41** |

**2024-25**

| ಕ್ರ.ಸಂ | ಜಿಲ್ಲೆ | ಕ್ರೀಡಾ ಶಾಲೆ/ ವಸತಿ ನಿಲಯ | ಕ್ರೀಡೆ | ರಾಜ್ಯ | | | ರಾಷ್ಟ್ರೀಯ | | | ಅಂತರ ರಾಷ್ಟ್ರೀಯ | | | ಒಟ್ಟು |
|---|---|---|---|---|---|---|---|---|---|---|---|---|---|
| | | | | ಚಿನ್ನ | ಬೆಳ್ಳಿ | ಕಂಚು | ಚಿನ್ನ | ಬೆಳ್ಳಿ | ಕಂಚು | ಚಿನ್ನ | ಬೆಳ್ಳಿ | ಕಂಚು | |
| 1 | ಉತ್ತರ ಕನ್ನಡ | ಹಳಿಯಾಳ | ಕುಸ್ತಿ | 5 | 1 | 2 | 0 | 0 | 2 | 0 | 0 | 0 | 10 |
| 2 | ಬೆಂಗಳೂರು | ವಿದ್ಯಾನಗರ | ಬಾಕ್ಸಿಂಗ್ | 14 | 6 | 2 | | 0 | 0 | 0 | 0 | 0 | 22 |
| | ಒಟ್ಟು | | | **19** | **7** | **4** | **0** | **0** | **2** | **0** | **0** | **0** | **32** |